ಸಂಪುಟ : 40 ಸಂಚಿಕೆ 141 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 17 ಜೂನ್ 2017 ಶನಿವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಆ.1 ರಿಂದ ಸಕಾಲದ ಅಡಿ ಇ-ಸ್ವತ್ತು ಯೋಜನೆ ಜಾರಿ : ಸಚಿವ ಎಚ್.ಕೆ.ಪಾಟೀಲ್

ವಿವರ : ಪುಟ 5




ಕಪ್ಪುಹಣ: ಭಾರತದೊಂದಿಗೆ ಮಾಹಿತಿ ವಿನಿಮಯಕ್ಕೆ ಸ್ವಿಸ್ ಒಪ್ಪಿಗೆ

50 ಸಾವಿರ ರೂ. ಮೀರಿದ ಹಣದ ವರ್ಗಾವಣೆಗೆ ಆಧಾರ್ ಕಡ್ಡಾಯ

ವಿವರ : ಪುಟ 6

AADHAAR

# ವಿಧೇಯಕ ವಿರುದ್ಧ ಸಿಡಿದೆದ್ದ ವೈದ್ಯರು

## ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಹೊರಟರೆ ಹೋರಾಟದ ಎಚ್ಚರಿಕೆ

**ಬೆಂಗಳೂರು**

ರಾಜ್ಯ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ-2017ನ್ನು ವಿರೋಧಿಸಿ ರಾಜ್ಯಾದ್ಯಂತ ಖಾಸಗಿ ವೈದ್ಯರು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿ,ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದ ರೈಲ್ವೆ ನಿಲ್ದಾಣದಲ್ಲಿ ಖಾಸಗಿ ಆಸ್ಪತ್ರೆಗಳು ಮತ್ತು ವೈದ್ಯರ ಸಂಘದ ನೇತೃತ್ವದಲ್ಲಿ ಸೇರಿದ ವೈದ್ಯರುಗಳು ಅಲ್ಲಿಂದ ಫ್ರೀಡಂ ಪಾರ್ಕ್‌ವರೆಗೆ ಬೃಹತ್ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಮುಂದಾದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

> ಚಿಕಿತ್ಸೆಗೆ ಇಷ್ಟು ಹಣ ಎಂದು ನಿಗದಿ ಮಾಡಲು ಇದು ಗಾರೆ, ಸಿಮೆಂಟ್ ಕೆಲಸ ಅಲ್ಲ. ವೈದ್ಯರು ಮಾಡುತ್ತಿರುವ ಕೆಲಸ ಸೇವೆ ಯಾಗಿದ್ದು, ಅದನ್ನು ವ್ಯಾಪಾರದ ರೀತಿ ಕಾಣಬಾರದು. ಗನ್ ಪಾಯಿಂಟ್ ಇಟ್ಟು ಕೆಲಸ ಮಾಡಿಸಬೇಡಿ. ಮಾನವೀಯತೆ ಪಾಠ ನಿಮ್ಮಿಂದ ಕಲಿಯುವ ಅಗತ್ಯವಿಲ್ಲ ಎಂದು ರಮೇಶ್ ಕುಮಾರ್ ವಿರುದ್ಧ ಹರಿಹಾಯ್ದರು.




ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ ವಿರೋಧಿಸಿ ಖಾಸಗಿ ಆಸ್ಪತ್ರೆಗಳು ನಡೆಸಿದ ಮುಷ್ಕರದ ಅಂಗವಾಗಿ ತುಮಕೂರಿನಲ್ಲಿ ಖಾಸಗಿ ಕ್ಲಿನಿಕ್‌ಗಳು ಮುಚ್ಚಿದ್ದವು.

ಖಾಸಗಿ ವೈದ್ಯರ ಮುಷ್ಕರದಿಂದಾಗಿ ನಗರದ ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದೆ ರೋಗಿಗಳು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿತ್ತು. ತುರ್ತು ನಿಗಾ ಘಟಕ ಹೊರತುಪಡಿಸಿ ಉಳಿದೆಲ್ಲಾ ಒಳ ರೋಗಿ ಹಾಗೂ ಹೊರ ರೋಗಿಗಳ ವಿಭಾಗದಲ್ಲಿ ವೈದ್ಯರು ಇಲ್ಲದ ಕಾರಣ ರೋಗಿಗಳು ದಿಕ್ಕು ತೋಚದಂತಾಗಿದ್ದರು. ಸರ್ಕಾರಿ ಆಸ್ಪತ್ರೆಗಳಿಗೆ ರೋಗಿಗಳು ದೌಡಾಯಿಸುತ್ತಿದ್ದುದು ಕಂಡು ಬಂತು.

ರೈಲ್ವೆ ನಿಲ್ದಾಣದಿಂದ ಫ್ರೀಡಂಪಾರ್ಕ್ ವರೆಗೆ ಬೃಹತ್ ಜಾಥಾ ಮೆರವಣಿಗೆ ನಡೆಸಿ ಸಮಾವೇಶಗೊಂಡ ವೈದ್ಯರನ್ನ ಉದ್ದೇಶಿಸಿ ಮಾತನಾಡಿದ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ, ರಾಜ್ಯ ಸರ್ಕಾರ ಜಾರಿಗೆ

> ಖಾಸಗಿ ಆಸ್ಪತ್ರೆ-ನರ್ಸಿಂಗ್ ಹೋಂಗಳು ಯಾರ ಅಂಕೆಯಲ್ಲಿಯೂ ಸಿಗುತ್ತಿಲ್ಲ. ಇವರದ್ದೇ ಆಟ ಎನ್ನುವಂತಾಗಿದೆ. ಸರ್ಕಾರ ಇವುಗಳಿಗೆ ಬ್ರೇಕ್ ಹಾಕದೇ ಹೋದರೆ ಮುಂದಿನ ದಿನಗಳಲ್ಲಿ ನಾವು ದುಡಿದ ಹಣವನ್ನೆಲ್ಲಾ ಇವರಿಗೆ ಹಾಕಬೇಕಾಗುತ್ತದೆ. ಸರ್ಕಾರ ಇನ್ನಷ್ಟು ಬಿಗಿ ಕ್ರಮ ಕೈಗೊಂಡು ಸಾರ್ವಜನಿಕರ ಜೀವ ಮತ್ತು ಆರೋಗ್ಯ ಉಳಿಸಲಿ ಎಂದು ಆಸ್ಪತ್ರೆಯ ಮುಂದೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದುದು ಕಂಡು ಬಂದಿತು.

ತರಲು ಮುಂದಾಗಿರುವ ಕಾನೂನು ಸಂವಿಧಾನದ ಮೌಲ್ಯಗಳಿಗೆ ಪೂರಕವಾಗಿಲ್ಲ, ಖಾಸಗಿ ಆರೋಗ್ಯ ವ್ಯವಸ್ಥೆ ಚೆನ್ನಾಗಿದೆ. ಅದನ್ನು ಹಾಳು ಮಾಡಬಾರದು. ಎಷ್ಟು ಸಚಿವರು, ಶಾಸಕರು ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಾರೆ ಎಂದು ಪ್ರಶ್ನಿಸಿದರು.

ಐ.ಎಂ.ಎ ಅಧ್ಯಕ್ಷ ಡಾ. ರವೀಂದ್ರ ಮಾತನಾಡಿ, ಸಚಿವ ರಮೇಶ್ ಕುಮಾರ್ ಅವರು ಖಾಸಗಿ ವೈದ್ಯರನ್ನು ನಿಕೃಷ್ಟವಾಗಿ ಕಾಣುತ್ತಿದ್ದಾರೆ. ನಮ್ಮನ್ನು ಲಜ್ಜೆಗೇಡಿ, ಲೂಟಿಕೋರರು ಎಂದು >>> 6ನೇ ಪುಟಕ್ಕೆ

## ಪಾವಗಡ ಆಶ್ರಮದಿಂದ ನೀರಿನ ಘಟಕ
# ಇಂದು ನಗರಕ್ಕೆ ಸಂತೋಷ್ ಹೆಗ್ಡೆ

**ತುಮಕೂರು**

ತುಮಕೂರು ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಪಾವಗಡದ ಶ್ರೀ ರಾಮಕೃಷ್ಣ ಸೇವಾಶ್ರಮ ಒದಗಿಸಿದ್ದು, ಆ ಸೌಲಭ್ಯವನ್ನು ಉದ್ಘಾಟಿಸಲು ಮಾಜಿ ಲೋಕಾಯುಕ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ಆಗಮಿಸಲಿದ್ದಾರೆ.



ಜೂನ್ 17 ರಂದು ಮಧ್ಯಾಹ್ನ 1 ಗಂಟೆಗೆ ( ಮೊದಲು ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದ್ದ ಕಾರ್ಯಕ್ರಮದ ಸಮಯ ನಂತರ ಬದಲಾಗಿದೆ) ಸರ್ಕಾರಿ ಪ.ಪೂ. ಕಾಲೇಜು ಆವರಣದಲ್ಲಿ ಪಾವಗಡ ಶ್ರೀ ರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ಜಪಾನಂದಜಿ ಅವರ ದಿವ್ಯ ಸಾನಿಧ್ಯದಲ್ಲಿ ನಡೆ ಯಲಿದೆ. ಈ ಕಾಲೇಜಿನಲ್ಲಿ ಕುಡಿಯುವ ನೀರಿನ ಸೌಲಭ್ಯ ಇಲ್ಲವೆಂಬುದನ್ನು ಮನಗಂಡು ಶ್ರೀ ಸ್ವಾಮಿ ಜಪಾನಂದಜೀ ಅವರು ಇನ್‌ಫೋಸಿಸ್ ಫೌಂಡೇ ಷನ್ ನೆರವಿನೊಂದಿಗೆ ಇಲ್ಲಿ ಒಂದು ಕೊಳವೆ ಬಾವಿ ಕೊರೆಸಿದ್ದಾರೆ. ಬಳಿಕ ಕಾಲೇಜಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಿದ್ದಾರೆ. ಆ ಮೂಲಕ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡಿದ್ದಾರೆ. ಈ ಸೇವಾ ಕಾರ್ಯಕ್ಕೆ ಚಾಲನೆ ನೀಡಲು ನ್ಯಾ. ಸಂತೋಷ್ ಹೆಗ್ಡೆ ಬರಲಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕ ಡಾ.ಎಸ್.ರಫೀಕ್ ಅಹಮದ್, ಮಾಜಿ ಶಾಸಕ ಎಸ್.ಷಫಿ ಅಹಮದ್, ಡಿಡಿಪಿಐ ಕೆ.ಕೃಷ್ಣಸ್ವಾಮಿ, ಮಾಜಿ ಟೂಡಾ ಅಧ್ಯಕ್ಷ ರೆಡ್ಡಿ ಚಿನ್ನಯಲ್ಲಪ್ಪ, ವಕೀಲ ಟಿ.ಎಸ್.ನಿರಂಜನ್, ಕಾರ್ಪೋರೇಟರ್ ಟಿ.ಎಸ್.ಕರುಣಾರಾಧ್ಯ, ಹಿರಿಯ ಉಪನ್ಯಾಸಕ ಎಂ.ಜಿ. ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ. ಇಂದು ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದ್ದ ಕಾರ್ಯಕ್ರಮವನ್ನು ಮಧ್ಯಾಹ್ನ 1 ಗಂಟೆಗೆ ಮುಂದೂಡಲಾಗಿದೆ.

₹55 Discount Per Gram
Gold 916 ₹ 2725/-
Silver ₹ 40100/-
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

# ಅನಿಲ ಭಾಗ್ಯಕ್ಕೆ ಸರ್ಕಾರ ಅಸ್ತು




**ಬೆಂಗಳೂರು**

ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಗೆ ಸರ್ಕಾರ ಕೊನೆಗೂ ಒಪ್ಪಿಗೆ ನೀಡಿದ್ದು, ಅಡುಗೆ ಅನಿಲ ಸಂಪರ್ಕ ಹೊಂದಿಲ್ಲದ ಬಡವರಿಗೆ ಉಚಿತ ಅಡುಗೆ ಅನಿಲ ಸಿಲಿಂಡರ್, ಸ್ಟೌವ್ ಒದಗಿಸಲಿದೆ.

ಈ ಮೂಲಕ ಕೇಂದ್ರ ಸರ್ಕಾರದ ಉಜ್ವಲ ಯೋಜನೆಗೆ ಪರ್ಯಾಯವಾಗಿ ಅನಿಲಭಾಗ್ಯ ಯೋಜನೆ ಜಾರಿಗೆ ತಂದಿರುವ ಸರ್ಕಾರ, ಜುಲೈ 10 ರೊಳಗಾಗಿ ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಗೆ ಚಾಲನೆ ನೀಡಲಿದ್ದಾರೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಯು.ಟಿ. ಖಾದರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಜ್ವಲ ಯೋಜನೆ ಜಾರಿಗೆ ಕೇಂದ್ರ ಸರ್ಕಾರ ಅಗತ್ಯ ಸಹಕಾರ ನೀಡಲಿಲ್ಲ, ಹೀಗಾಗಿ ರಾಜ್ಯ ಸರ್ಕಾರ ಎಲ್ಲಾ ಅರ್ಹ ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯ ದೊರಕಿಸಿಕೊಡಲಿದೆ. ಕೇಂದ್ರದ ಉಜ್ವಲ ಯೋಜನೆಯಡಿ ಸೌಲಭ್ಯ ಪಡೆಯುವವರಿಗೆ ರಾಜ್ಯದ ಅನಿಲ ಭಾಗ್ಯ ಸೌಕರ್ಯ ದೊರೆಯುವುದಿಲ್ಲ, ಕೇಂದ್ರ ಸರ್ಕಾರದ ಉಜ್ವಲ ಯೋಜನೆಯಡಿ ಅಡುಗೆ ಅನಿಲ ಸಿಲಿಂಡರ್ ಮಾತ್ರ ದೊರೆಯಲಿದ್ದು, ಸ್ಟೌವ್ ಅನ್ನು ಫಲಾನುಭವಿ ಖರೀದಿಸಬೇಕಾಗಿದೆ ಎಂದರು.

ರಾಜ್ಯದಲ್ಲಿ >>> 10ನೇ ಪುಟಕ್ಕೆ

# ತಹಸೀಲ್ದಾರ್ ಸೇರಿ 10 ಮಂದಿ ವಿರುದ್ಧ ಎಫ್‌ಐಆರ್ ದಾಖಲು

## ಅಕ್ರಮವಾಗಿ ಜಮೀನಿನ ಖಾತೆ ಮಾಡಿಕೊಟ್ಟ ಆರೋಪ

**ತುಮಕೂರು**

ಅಕ್ರಮವಾಗಿ ಮತ್ತೊಬ್ಬರಿಗೆ ಜಮೀನಿನ ಖಾತೆ ಮಾಡಿಕೊಟ್ಟ ಆರೋಪದ ಹಿನ್ನೆಲೆಯಲ್ಲಿ ನ್ಯಾಯಾಲಯದ ಸೂಚನೆ ಮೇರೆಗೆ ಇಲ್ಲಿನ ನಗರ ಠಾಣಾ ಪೊಲೀಸರು ತುಮಕೂರು ತಹಸೀಲ್ದಾರ್ ಸೇರಿದಂತೆ 10 ಮಂದಿ ವಿರುದ್ಧ ಎಫ್.ಐ.ಆರ್. ದಾಖಲಿಸಿರುವ ಪ್ರಕರಣ ಬೆಳಕಿಗೆ ಬಂದಿದೆ.

ತುಮಕೂರು ನಗರದ ಬಟವಾಡಿ ಬಳಿಯ ಸ.ನಂ.38/1 ರಲ್ಲಿ 6.29 ಗುಂಟೆ ಜಮೀನನ್ನು ಮಹಮ್ಮದ್ ಅಲೀಂ ಎಂಬುವರು ಹೊಂದಿದ್ದಾರೆ. ಇವರ ತಾತ ಅಬ್ದುಲ್ ಸತ್ತಾರ್ ಸಾಬ್ ಅವರಿಂದ ವಂಶ ಪಾರಂಪರ್ಯವಾಗಿ ಈ ಜಮೀನು ಬಂದಿರುತ್ತದೆ. 1944 ರಲ್ಲಿ ಅಬ್ದುಲ್ ಸತ್ತಾರ್ ಅವರು ಸಾರ್ವಜನಿಕ ಹರಾಜಿನ ಮೂಲಕ ಸದರಿ ಜಮೀನನ್ನು ಖರೀದಿಸಿದ್ದರು. ಅಂದಿನಿಂದಲೂ ಅವರೇ ಜಮೀನಿನ ಕಾನೂನು ಬದ್ಧವಾರಸುದಾರರಾಗಿ ಅನುಭವದಲ್ಲಿದ್ದು, ದಾಖಲಾತಿಗಳನ್ನು ಮಾಡಿಕೊಂಡಿದ್ದರು.

ಆದರೆ, ಕೆಲವರು ಮೇಲ್ಕಂಡ ಸದರಿ ಜಮೀನು ತಮ್ಮದು ಎಂದು ಹೇಳಿಕೊಂಡು ಹಕ್ಕು ಚಲಾವಣೆ ಮಾಡಲು ಹೊರಟಿದ್ದರು. ಇದರ ವಿರುದ್ಧ ಮಹಮ್ಮದ್ ಅಲೀಂ ಹೈಕೋರ್ಟ್‌ನಲ್ಲಿ ಆರ್.ಎಸ್.ಎ. ಅರ್ಜಿ ದಾಖಲಿಸಿದ್ದು, ರಾಜ್ಯ ಹೈಕೋರ್ಟ್ ಸದರಿ ಜಮೀನಿನ ಯಥಾಸ್ಥಿತಿ ಕಾಪಾಡುವಂತೆ 4.1.2016 ರಂದು ತಿಳಿಸಿತ್ತು. ಇಷ್ಟಾದರೂ ಸಹ ಕೆಲವರು ಜಮೀನು ಕಬಳಿಸಲು ಮುಂದಾಗಿದ್ದು, ಇದಕ್ಕೆ ತಹಸೀಲ್ದಾರ್ ಮತ್ತು ಕಛೇರಿಯ ಅಧಿಕಾರಿಗಳು ಸಹಕರಿಸಿದ್ದಾರೆ. ಇವರೆಲ್ಲರ ಸಹಕಾರದಿಂದ ಬೇರೊಬ್ಬರಿಗೆ ಅಕ್ರಮವಾಗಿ ಖಾತೆ, ಪಹಣಿ ಮಾಡಿಕೊಡಲಾಗಿದೆ ಎಂಬುದು ದೂರಿನ ಸಾರಾಂಶವಾಗಿದೆ. ತಹಸೀಲ್ದಾರ್ ರಂಗೇಗೌಡ, ರೆವಿನ್ಯೂ ಇನ್ಸ್‌ಪೆಕ್ಟರ್ ಮಹೇಶ್, ರೆವಿನ್ಯೂ ಶಿರಸ್ತೇದಾರ್ ಭಾನುಪ್ರಕಾಶ್, ಗ್ರಾಮ ಲೆಕ್ಕಿಗ ಮಂಜುನಾಥ್ ಅವರುಗಳು ಅಬ್ದುಲ್ ರಹೀಂ ಮತ್ತಿತರರ ಹೆಸರನ್ನು ಆರ್.ಟಿ.ಸಿ.ನಲ್ಲಿ ಸೇರ್ಪಡೆ ಮಾಡಿದ್ದಾರೆ. ಈ >>> 6ನೇ ಪುಟಕ್ಕೆ

> **ನ್ಯಾಯಾಲಯದ ಸೂಚನೆ ಮೇರೆಗೆ ಮೇ 26 ರಂದು ನಗರ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಐಪಿಸಿ ಕಲಂ 320, 323, 420, 467, 468, 506 ಅನ್ವಯ ಪ್ರಕರಣ ದಾಖಲಾಗಿದೆ. ಉನ್ನತ ನ್ಯಾಯಾಲಯದಲ್ಲಿ ಯಥಾಸ್ಥಿತಿ ಕಾಪಾಡುವಂತೆ ತಿಳಿಸಿದ್ದರೂ ಸಹ ಜಮೀನನ್ನು ಬೇರೆಯವರಿಗೆ ಖಾತೆ, ಪಹಣಿ ಮಾಡಿ ಕಂದಾಯ ಇಲಾಖಾಧಿಕಾರಿಗಳು ಅಕ್ರಮ ವೆಸಗಿದ್ದಾರೆಂಬ ಆರೋಪ ಎದುರಾಗಿದೆ.**

# ಮಟ್ಕಾ ನಿಯಂತ್ರಿಸುವಲ್ಲಿ ವಿಫಲ: ಪಿಎಸ್‌ಐ ಅಮಾನತು

## ತುಮಕೂರಿನಿಂದ ತೆರಳಿ ದಾಳಿ ನಡೆಸಿದ್ದರೂ ಕ್ರಮ ಕೈಗೊಳ್ಳದ ಆರೋಪ

**ಪಾವಗಡ**

ಪಟ್ಟಣದಲ್ಲಿ ನಿರಂತರವಾಗಿ ಮಟ್ಕಾ ದಂಧೆಯನ್ನು ನಡೆಸುತ್ತಿರುವ ಆರೋಪದಡಿಯಲ್ಲಿ ಅಶ್ವಥ್ ಮತ್ತು ಅತನ 5 ಸಹಚರರನ್ನು ತುಮಕೂರಿನ ಅಪರಾಧ ವಿಭಾಗದ ಡಿ.ವೈ. ಎಸ್.ಪಿ. ಗೌತಮ್ ಹಾಗೂ ಪ್ರಾಣೇಶ್ ನೇತೃತ್ವದಲ್ಲಿ ಗುರುವಾರ ಮಧ್ಯಾಹ್ನ ದಾಳಿ ನಡೆಸಿ ಹಣ ಮತ್ತು ಮಟ್ಕಾ ದಂಧೆಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದರು.

ಅಶ್ವಥ್ ಮತ್ತು ಅತನ 5 ಸಹಚರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು, ಇದೇ ವೇಳೆ ಅಶ್ವಥ್‌ಗೆ ಎದೆ ನೋವು ಕಾಣಿಸಿಕೊಂಡಿದ್ದರಿಂದ ಪಾವಗಡ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ದಾಖಲಿಸಿದ್ದರು. ಮಟ್ಕಾ ದಂಧೆಯ ಬಗ್ಗೆ ಸಾರ್ವಜನಿಕರು ನೀಡಿದ ದೂರನ್ನು ಸ್ವೀಕರಿಸಿ ಮಟ್ಕಾ ನಿಯಂತ್ರಿಸುವಲ್ಲಿ ಪಿಎಸ್‌ಐ ಮಲ್ಲಿಕಾರ್ಜುನ್ ನಿರಾಕರಿಸಿದ್ದಾರೆ ಎಂಬ ಆರೋಪದಡಿಯಲ್ಲಿ ತುಮಕೂರಿನ ಎಸ್.ಪಿ. ಡಾ.ದಿವ್ಯ ಗೋಪಿನಾಥನ್ ಗುರುವಾರ ರಾತ್ರಿಯೇ ಮಲ್ಲಿಕಾರ್ಜುನ್‌ಅವರನ್ನು ಅಮಾನತುಗೊಳಿಸಿದ್ದಾರೆ. ಮಲ್ಲಿಕಾರ್ಜುನ್ ಇನ್ನು ಕೇವಲ 10 ತಿಂಗಳಲ್ಲಿ ನಿವೃತ್ತಿ ಹೊಂದಲಿದ್ದಾರೆ.

1 ರೂ.ಗಳಿಗೆ 70 ರೂಗಳನ್ನು,ನೂರು ರೂ.ಗಳಿಗೆ 7 ಸಾವಿರ ನೀಡುವ ಈ ದಂಧೆಯು ಒಳಗಿನ ಆಟ ಮತ್ತು ಹೊರಗಿನ ಆಟ ಎಂಬುದಾಗಿ 2



ವಿಧದಲ್ಲಿ ನಡೆಯಲಿದೆ ಎಂಬ ಮಾಹಿತಿ ಇದ್ದು, ಕೂಲಿಕಾರ್ಮಿಕರು, ಸರ್ಕಾರಿ ನೌಕರರು ಸಹ ಈ ಆಟವನ್ನು ಆಡುತ್ತಾರೆ ಎಂಬ ಮಾತುಗಳಿವೆ, ಅಶ್ವಥ್ ಹಲವು ವರ್ಷಗಳಿಂದ ಈ ದಂಧೆಯನ್ನು ನಡೆಸಿಕೊಂಡು ಬರುತ್ತಿದ್ದು, ಈಗಾಗಲೇ ಗಡಿಪಾರು ಮತ್ತು ಸೆರೆವಾಸ ಅನುಭವಿಸಿದ್ದು, ಈತ ಪಾವಗಡದ ಗಡಿ ಗ್ರಾಮಗಳಾದ ಕುಂದಿರ್ಪಿ ಮತ್ತು ಕಂಬದೂರು, ಕಲ್ಯಾಣದುರ್ಗ ಮತ್ತಿತರ ಕಡೆಗಳಿಂದ ಈ ದಂಧೆಯನ್ನು ಮೊಬೈಲ್ ನಲ್ಲಿ ಆಡಿಸುತ್ತಿದ್ದ ಎನ್ನಲಾಗಿದೆ.

ಪಾವಗಡ ತಾಲ್ಲೂಕು ಸುತ್ತಲೂ ಆಂಧ್ರದ ಗಡಿಯಲ್ಲಿರುವುದರಿಂದ ಈ ಮಟ್ಕಾ ದಂಧೆಹಲವಾರು ವರ್ಷಗಳಿಂದ ನಡೆಯುತ್ತಾ ಬಂದಿದ್ದು, ಈ ದಂಧೆಯನ್ನು ನಿಯಂತ್ರಿಸಲು ಪೊಲೀಸರು ವಿಫಲರಾಗಿದ್ದಾರೆ ಎಂಬ ಆರೋಪದಡಿಯಲ್ಲಿ ಕಳೆದ ವರ್ಷಗಳಿಂದ ನಾಲ್ಕೈದು ಪಿ.ಎಸ್.ಐ.ಗಳ ಅಮಾನತ್ ಗೊಂಡಿರುವುದು ಮಟ್ಕಾ ದಂಧೆಯ ಶಾಪವಾಗಿದೆ.

ಪಟ್ಟಣದಲ್ಲಿ ನಿರಂತರವಾಗಿ ಮಟ್ಕಾ ದಂಧೆಯನ್ನು ನಡೆಸುತ್ತಿರುವ ಆರೋಪದಡಿಯಲ್ಲಿ ಆಶ್ವಥ್ ಮತ್ತು ಅತನ 5 ಸಹಚರರನ್ನು ತುಮಕೂರಿನ ಅಪರಾಧ ವಿಭಾಗದ ಡಿ.ವೈ. ಎಸ್.ಪಿ. ಗೌತಮ್ ಹಾಗೂ ಪ್ರಾಣೇಶ್ ನೇತೃತ್ವದಲ್ಲಿ ಗುರುವಾರ ಮಧ್ಯಾಹ್ನ ದಾಳಿ >>> 6ನೇ ಪುಟಕ್ಕೆ

# ತುಮಕೂರು ಪಾಲಿಕೆಗೆ ಸ್ಮಾರ್ಟ್ ಕಲ್ಪನೆಯ ಹೊಸ ಕಟ್ಟಡ

♦ **ಆರ್.ಎಸ್.ಅಯ್ಯರ್**
**ತುಮಕೂರು**

ತುಮಕೂರು ನಗರ ಸ್ಮಾರ್ಟ್ ಸಿಟಿ ಆಗುತ್ತಿರುವ ಸಂದರ್ಭದಲ್ಲೇ ಸ್ಮಾರ್ಟ್ ಸಿಟಿ ಪರಿಕಲ್ಪನೆಯಲ್ಲೇ ತುಮಕೂರು ಮಹಾ ನಗರ ಪಾಲಿಕೆಗೊಂದು ನವೀನ ಕಟ್ಟಡ ನಿರ್ಮಾಣವಾಗಲಿದೆ. ಎಸ್.ಎಫ್.ಸಿ. ಅನುದಾನದ 5.4 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಒಂದೇ ಸೂರಿನಡಿ ಎಲ್ಲ ಶಾಖೆಗಳೂ ಒಳಗೊಳ್ಳುವಂತಹ, ಜನಪ್ರತಿನಿಧಿಗಳು ಮತ್ತು ಅಧಿಕಾರಿ/ಸಿಬ್ಬಂದಿಗೆ ಅವರವರ ಸ್ಥಾನಕ್ಕನುಗುಣವಾಗಿ ಶಾಶ್ವತ ಕೊಠಡಿಗಳು, ಸಭಾಂಗಣ ಒಳಗೊಂಡ ಸುಸಜ್ಜಿತ-ಶಾಶ್ವತ ಕಟ್ಟಡದ ಮೊದಲ ಹಂತದ ನಿರ್ಮಾಣಕ್ಕೆ ಪಾಲಿಕೆ ಸಜ್ಜಾಗಿದೆ.

> **ಸಾರ್ವಜನಿಕರಿಗೆ ಪ್ರತ್ಯೇಕ ಗ್ಯಾಲರಿಗಳ ಮೂಲಕ ಆಸನ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. ಅಲ್ಲೇ ಪಕ್ಕದಲ್ಲಿ ಮೇಯರ್ ಅವರಿಗಾಗಿ ಪ್ರತ್ಯೇಕ ಕೊಠಡಿ ಇರಲಿದೆ. ಈ ಮಹಡಿಯಲ್ಲೇ ಆರೋಗ್ಯ ಶಾಖೆ, ಎಸ್ಟಾಬ್ಲಿಷ್ ಮೆಂಟ್ ಶಾಖೆ ಇತ್ಯಾದಿಗೂ ವ್ಯವಸ್ಥೆ ಮಾಡಲಾಗುವುದು.ಮೂರನೆಯ ಹಾಗೂ ಕೊನೆಯ ಮಹಡಿಯಲ್ಲಿ ಪಾಲಿಕೆಯ ರೆಕಾರ್ಡ್ ಕೊಠಡಿ, ಸುರಕ್ಷತಾ ಸಿಬ್ಬಂದಿ ಕೊಠದಿ, ಎಸ್. ಜೆ.ಎಸ್.ಆರ್.ವೈ. ವಿಭಾಗ ಮತ್ತು ಕಾಫಿ-ಟೀ ಸೌಲಭ್ಯದ ಕೊಠಡಿ ನಿರ್ಮಿಸಲು ಯೋಜಿಸಲಾಗಿದೆ.**



ತುಮಕೂರು ಮಹಾನಗರ ಪಾಲಿಕೆ ಆವರಣದಲ್ಲಿ ಶ್ರೀಕೃಷ್ಣರಾಜೇಂದ್ರ ಪುರ ಭವನದ ಹಿಂಭಾದ ಅಶ್ವತ್ಥ ಕಟ್ಟೆ ಇದೆ. ಅದರ ಹಿಂಬದಿ ಪಾಲಿಕೆಗೆ ಸೇರಿದ ಸುಮಾರು ಐದಾರು ದಶಕಗಳಷ್ಟು ಹಳೆಯದಾದ ಕಟ್ಟಡ ಇತ್ತು. ಆ ಕಟ್ಟಡ ಇದ್ದ ಸ್ಥಳದಲ್ಲೇ ನವ ಕಟ್ಟಡ ನಿರ್ಮಾಣಕ್ಕೆ ಪಾಲಿಕೆ ಯೋಜನೆ ರೂಪಿಸಿದೆ. ಅದಕ್ಕಾಗಿ ಪ್ರಕ್ರಿಯೆಗಳು ಆರಂಭವಾಗಿದೆ. ಮೊದಲನೆಯದಾಗಿ ಈಗಾಗಲೇ ಸದರಿ ಹಳೆಯ ಕಟ್ಟಡಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗಿದೆ. ಎರಡನೆಯದಾಗಿ ಅಲ್ಲೇ ಅಕ್ಕಪಕ್ಕದಲ್ಲಿದ್ದ 12 ವೃಕ್ಷಗಳನ್ನು ತೆರವುಗೊಳಿಸಲು ಉದ್ದೇಶಿಸಿದ್ದು, ಪರಿಸರಾಸಕ್ತರ ಪ್ರಬಲ ವಿರೋಧದಿಂದ ಅದು ತಾತ್ಕಾಲಿಕವಾಗಿ ಸ್ಥಗಿತವಾಗಿದೆ.

**ಈಗ ಜಿ ಪ್ಲಸ್ ಒನ್ ನಿರ್ಮಾಣ:** ಪ್ರಸ್ತುತ ಮಹಾನಗರ ಪಾಲಿಕೆಯು ಈ ವಿಶಾಲವಾದ ಸ್ಥಳದಲ್ಲಿ ನೆಲ ಅಂತಸ್ತು (ಗ್ರೌಂಡ್ ಫ್ಲೋರ್) ಮತ್ತು ಮೂರು ಮಹಡಿ(3 ಫ್ಲೋರ್) ಯುಳ್ಳ ಬೃಹತ್ ಕಟ್ಟಡವನ್ನು (ಜಿ ಪ್ಲಸ್ ತ್ರಿ) ಹಂತಹಂತವಾಗಿ ನಿರ್ಮಿಸಲು ಯೋಜನೆ ಹಾಕಿಕೊಂಡಿದೆ. ಪ್ರಸ್ತುತ ಮೊದಲನೇ ಹಂತದ ಕಾಮಗಾರಿಯನ್ನು ಕೈಗೊಳ್ಳುತ್ತಿದೆ. ಅಂದರೆ ಎಸ್.ಎಫ್.ಸಿ. ಅನುದಾನದಲ್ಲಿ ಲಭ್ಯ ವಿರುವ 5 ಕೋಟಿ 40 ಲಕ್ಷ ರೂಪಾಯಿ ಅನುದಾನದಲ್ಲಿ ನೆಲ ಅಂತಸ್ತು ಮತ್ತು ಒಂದನೇ ಮಹಡಿಯನ್ನು (ಜಿ ಪ್ಲಸ್ ಒನ್) ಮಾತ್ರ ನಿರ್ಮಿಸಲು ಉದ್ದೇಶಿಸಿದೆ. ನೆಲ ಅಂತಸ್ತು 221 ಚದರ ಅಡಿಗಳು ಮತ್ತು ಮೊದಲ ಮಹಡಿ 205 ಚದರ ಅಡಿಗಳು ಸೇರಿ ಒಟ್ಟು 426 ಚದರ ಅಡಿಗಳಷ್ಟು ಕಟ್ಟಡ ನಿರ್ಮಾಣವಾಗಲಿದೆ.

**ನೆಲ ಅಂತಸ್ತಿನ ಸೌಲಭ್ಯಗಳು:** ನೆಲ ಅಂತಸ್ತಿನಲ್ಲಿ ಉತ್ತರ ದಿಕ್ಕಿನಲ್ಲಿ ಪ್ರಧಾನ ಪ್ರವೇಶ ದ್ವಾರ ಇರುತ್ತದೆ. ಇದು ಸಾರ್ವಜನಿಕರಿಗಾಗಿ ಇರಲಿದೆ. ಪೂರ್ವ ದಿಕ್ಕಿನಲ್ಲಿ ಮತ್ತೊಂದು ಪ್ರವೇಶದ್ವಾರ ಇರಲಿದ್ದು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಆಗಮನ-ನಿರ್ಗಮನಕ್ಕಾಗಿ ಬಳಕೆಯಾಗಲಿದೆ. ಒಳಾವರಣದಲ್ಲಿ ಪಾಲಿಕೆಯ ಆಯುಕ್ತರ ಕೊಠಡಿ, ಕಂದಾಯ ಆಯುಕ್ತರ ಕೊಠಡಿ, ಮುಖ್ಯ ಲೆಕ್ಕಾಧಿಕಾರಿಗಳ ಕೊಠಡಿ, ಇಬ್ಬರು ವ್ಯವಸ್ಥಾಪಕರ ಕೊಠಡಿಗಳು, ಸಾಮಾನ್ಯ ಆಡಳಿತ ಕಛೇರಿ, ಕಂಟ್ರೋಲ್ ರೂಂ, ಸಕಾಲ ಕೌಂಟರ್, ವಿ.ಐ.ಪಿ. ವೈಟಿಂಗ್ ಲಾಂಜ್, ಲೆಕ್ಕಪತ್ರ ಶಾಖೆ, ಕಂದಾಯ ಶಾಖೆ, ಟೌನ್ ಪ್ಲಾನಿಂಗ್ ವಿಭಾಗ, ಸಾಮಾಜಿಕ ಅರಣ್ಯ ವಿಭಾಗ, ತೆರಿಗೆ ಪಾವತಿ ಕೌಂಟರ್, ಶೌಚಾಲಯಗಳು, ಮೂರು ಕಡೆ ಮಹಡಿ ಮೆಟ್ಟಿಲು, ಮೂರು ಲಿಫ್ಟ್‌ಗಳು, ವಿಕಲಚೇತನರಿಗಾಗಿ ರ್‍ಯಾಂಪ್ ವ್ಯವಸ್ಥೆ ಮೊದಲಾದ ಸೌಲಭ್ಯಗಳಿರುತ್ತವೆ.

**ಮೊದಲನೇ ಮಹಡಿಯಲ್ಲಿ ಸೌಲಭ್ಯಗಳು:** ಮೊದಲನೇ ಮಹಡಿಯಲ್ಲಿ ಸಂಸತ್ ಸದಸ್ಯರ ಕೊಠಡಿ, ಶಾಸಕರ ಕೊಠಡಿ, ಮೇಯರ್ ಕೊಠಡಿ, ಉಪ ಮೇಯರ್ ಕೊಠಡಿ, ನಾಲ್ಕು ಸ್ಥಾಯಿ ಸಮಿತಿಗಳಿಗಾಗಿ ಪ್ರತ್ಯೇಕ ಕೊಠಡಿಗಳು, ವಿರೋಧ ಪಕ್ಷದ ನಾಯಕನ ಕೊಠಡಿ, ಮೂರು ಎಕ್ಸಿಕ್ಯುಟೀವ್ ಕೊಠಡಿಗಳು, ಸೂಪರಿಂಟೆಂಡೆಂಟ್ ಇಂಜಿನಿಯರ್ ಕೊಠಡಿ, ಎಕ್ಸಿಕ್ಯುಟೀವ್ ಇಂಜಿನಿಯರ್ ಸೇರಿದಂತೆ ಇಂಜಿನಿಯರಿಂಗ್ ಅಧಿಕಾರಿಗಳು ಮತ್ತು ಸಿಬ್ಬಂದಿಗಾಗಿ ಕೊಠಡಿ, ಇಂಜಿನಿಯರಿಂಗ್ ವಿಭಾಗಕ್ಕೆ ಪೂರಕವಾದ ಅಕೌಂಟ್ಸ್ ವಿಭಾಗದ ಕೊಠಡಿ, ಒಂದು ಮಿನಿ ಸಭಾಂಗಣ, ಲಿಫ್ಟ್ ಮತ್ತು ಮಹಡಿ ಮೆಟ್ಟಿಲುಗಳು ಇರುತ್ತವೆ.

**18 ತಿಂಗಳುಗಳಲ್ಲಿ ನಿರ್ಮಾಣ ಪೂರ್ಣ:** ಸದ್ಯಕ್ಕೆ ಈ ಸೌಲಭ್ಯಗಳನ್ನು ಒಳಗೊಂಡ ನೆಲ ಅಂತಸ್ತು ಮತ್ತು ಮೊದಲನೇ ಮಹಡಿ (ಜಿ ಪ್ಲಸ್ ಒನ್) ನಿರ್ಮಾಣಕ್ಕೆ ಪಾಲಿಕೆಯು ಸಿದ್ಧತೆ ಮಾಡಿಕೊಂಡಿದೆ. ನೈಸರ್ಗಿಕ ಬೆಳಕು ಮತ್ತು ಗಾಳಿಗೆ ಸಾಕಷ್ಟು ಅವಕಾಶವಿರುವಂತೆ ಕಟ್ಟಡ ವಿನ್ಯಾಸ ಮಾಡಿಕೊಳ್ಳಲಾಗಿದೆ. ಭೂಮಿಯನ್ನು ಗುತ್ತಿಗೆದಾರರಿಗೆ ಹಸ್ತಾಂತರ ಮಾಡಿದ ಬಳಿಕ ಮುಂದಿನ >>> 6ನೇ ಪುಟಕ್ಕೆ

# ಕಾನೂನಿನಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ

**ಬೆಂಗಳೂರು**

ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸುವ ತಿದ್ದುಪಡಿ ವಿಧೇಯಕಕ್ಕೆ ವೈದ್ಯರು ವಿರೋಧ ವ್ಯಕ್ತಪಡಿಸಿ, ತೀವ್ರ ಪ್ರತಿಭಟನೆ ಆರಂಭಿಸಿದೆ. ಆದರೆ ಸರ್ಕಾರ ಹೊಸ ಕಾನೂನು ತರುವ ವಿಚಾರದಲ್ಲಿ ಹಿಂದೆ ಸರಿಯದಿರಲು ತೀರ್ಮಾನಿಸಿದೆ.

ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸುವ ತಿದ್ದು ಪಡಿ ಕಾಯ್ದೆಯನ್ನು ಎರಡು ದಿನಗಳ ಹಿಂದೆ ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಇದರಿಂದ ಖಾಸಗಿ ಆಸ್ಪತ್ರೆಗಳನ್ನು ದೊಡ್ಡ ಮಟ್ಟದಲ್ಲಿ ನಿಯಂತ್ರಿಸಬಹುದು ಎನ್ನುವ ನಿಲುವಿನಲ್ಲಿ ಸರ್ಕಾರವಿದೆ.

ಅದರ ಬೆನ್ನಲ್ಲೇ ಖಾಸಗಿ ಆಸ್ಪತ್ರೆಗಳ ವೈದ್ಯರು ಪ್ರತಿಭಟನೆ ಆರಂಭಿಸಿದ್ದು,ಅವರ ಪ್ರತಿಭಟನೆ ಯಲ್ಲಿ ಅರ್ಥವೇ ಇಲ್ಲ ಎಂದಿರುವ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಟಿ.ಬಿ.ಜಯಚಂದ್ರ,ಈ ಕುರಿತು ವಿವರವಾಗಿ ಚರ್ಚೆಯಾಗಲಿ ಎಂದು ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗ ತಿದ್ದುಪಡಿ ವಿಧೇಯಕ ಮಂಡನೆಯಾಗಿದೆ. ಈ ಕುರಿತು ಚರ್ಚೆ ನಡೆದ ನಂತರ ಮುಂದಿನ ತೀರ್ಮಾನದ ಬಗ್ಗೆ ಯೋಚನೆ ಮಾಡೋಣ. ಜನಪ್ರತಿನಿಧಿಗಳ ಅಭಿಪ್ರಾಯವನ್ನು ಕೇಳದೇ ನಿರ್ಧಾರಕ್ಕೆ ಬರುವುದು ಸೂಕ್ತವಲ್ಲ, ಅವರ ಅಭಿಪ್ರಾಯವನ್ನು ಕೇಳುವ ಮೊದಲೇ ಪ್ರತಿಭಟನೆ ನಡೆಸುವುದು ಸರಿಯಲ್ಲ ಎಂದು ಅವರು ಇದೇ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಿದರು.

ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರತ್ಯೇಕವಾಗಿ ಮಾತನಾಡಿ, ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸುವ ತಿದ್ದುಪಡಿ ಕಾಯ್ದೆಯನ್ನು ಸರ್ಕಾರ ಮಂಡಿಸಿದೆ. ಇದನ್ನು ಮಾಡುವ ಬದಲು ಮೊದಲು ಅದು ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿ ಜನರಿಗೆ ಅತ್ಯುತ್ತಮ ಸವಲತ್ತು ನೀಡಲು ಮುಂದಾಗಬೇಕು ಎಂದರು.ಸರ್ಕಾರಿ ಆಸ್ಪತ್ರೆಗಳು ನೆಟ್ಟಗಿದ್ದರೆ ಜನ ಯಾಕೆ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ? ಹೀಗಾಗಿ ಸರ್ಕಾರ ಮೊದಲು ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಿ. >>> 10ನೇ ಪುಟಕ್ಕೆ

